'ಹುಟ್ಟುಹಬ್ಬದ ಮೋಜಿನಲ್ಲಿ ಕೊನೆಯುಸಿರೆಳೆದ ನತದೃಷ್ಟೆ'

ಕೀರ್ತಿಮಾನ್‌ಗೆ ತಿಳಿದಂತೆ ಆಕೆ ನಗರದ ಪ್ರಖ್ಯಾತ ಚಿನ್ನದ ವ್ಯಾಪಾರಿ ಶಶಿಧರ್ ದೇಸಾಯಿಯವರ ಸುಂದರ ಪತ್ನಿ. ಆಕೆ ತಮ್ಮ ಪಾಲಿಸಿ ವಿಷಯವಾಗಿ ಕೆಲ ತಿಂಗಳ ಕೆಳಗೆ ಕಚೇರಿಗೆ ಬಂದಾಗ ಆಕೆಯ ಚೆಲುವನ್ನು ಕಂಡು ಎಲ್ಲರಂತೆ ತಾನೂ ಮೂಕವಿಸ್ಮಿತನಾಗಿದ್ದ.

ದೇಶ ವಿದೇಶದಲ್ಲೂ ನಂ.1 ಆಭರಣಗಳ ಅಂಗಡಿ ಚೈನ್ ಎಂದೇ ಸುಪ್ರಸಿದ್ಧವಾದ 'ದೇಸಾಯಿ ಜ್ಯುವೆಲರ್ಸ್'ನ ಮಾಲೀಕ 55 ವರ್ಷ ವಯಸ್ಸಿನ ಶಶಿಧರ್ ತನ್ನ ಮೊದಲನೆ ಪತ್ನಿ ರೀಮಾ ಕ್ಯಾನ್ಸರ್ ಬಂದು ತೀರಿಕೊಂಡ ಎರಡು ವರ್ಷದೊಳಗೆ ನಗರದ ಜನಪ್ರಿಯ ನಟಿ– ಮಾಡೆಲ್ ಅಂಚನಾ ಜತೆಗೆ ಒಂದು ಎಡೆಬಿಡದ ರೊಮಾನ್ಸ್‌ನಲ್ಲಿ ತೊಡಗಿ ಹೋದ ವರ್ಷವಷ್ಟೇ ಮದುವೆಯಾಗಿದ್ದರು. ಜನಪ್ರಿಯ ಚಿತ್ರತಾರೆಯರು, ಸಂಗೀತಗಾರರೂ, ಮಂತ್ರಿಗಳು. ಉದ್ಯಮಿಗಳು ಎಲ್ಲರೂ ಹಿಂದೆಂದೂ ನಡೆಯದಂಥ ಆ ವೈಭವೋಪೇತ ಮದುವೆ ಸಮಾರಂಭಕ್ಕೆ ಬಂದು ಇವರ ಹೆಗಲಿಗೆ ಹೆಗಲು ಉಜ್ಜಿ ಮಾಧ್ಯಮಗಳ ಮುಂದೆ ಮಿಂಚಿದ್ದರು. ಮೂವತ್ತರ ಸುಂದರಿಗೂ ಐವತ್ತೈದರ ಈತನಿಗೂ ಏನು ವರಸಾಮ್ಯ ಎಂದು ಸಾಮಾನ್ಯ ಜನರು ಕೊಂಕಿಯಾಡಿದ್ದುಂಟು. ಕೊನೆಗೆ ಎಲ್ಲಾ ಹಣದ ಮಹಿಮೆ ಎಂದು ಮತ್ಸರದಿಂದ ನಿಡುಸುಯ್ದವರೇ ಹೆಚ್ಚು.

ಕೀರ್ತಿಮಾನ್ ಪತ್ರಿಕೆ ವರದಿಯನ್ನು ಆಸಕ್ತಿಯಿಂದ ಓದತೊಡಗಿದ. ಅದರ ಸಾರಾಂಶವಿಷ್ಟೇ:

'ನಿನ್ನೆ ನಡೆದ ಆಕೆಯ 31 ನೇ ಬರ್ತ್–ಡೇ ಪಾರ್ಟಿಯಲ್ಲಿ ರಾತ್ರಿ ಹನ್ನೆರಡರ ಹೊತ್ತಿಗೆ ಬಿರುಸಾಗಿ ಕುಡಿತ ಕುಣಿತ ನಡೆಯುತಿದ್ದ ಮೋಜಿನ ಸ್ಥಿತಿಯಲ್ಲಿ ಮನೆಯ ಹಿಂದಿನ ಅಂಗಳದ ಈಜುಕೊಳದ ಒಂದು ಮೂಲೆಯಲ್ಲಿ ಆಕೆಯ ಹೆಣ ಅರೆಬರೆ ಮುಳುಗಿದ್ದು ಕಾಣಿಸಿದೆ. ಪೊಲೀಸ್ ಪ್ರಕಾರ ಆಕೆ ಪಾರ್ಟಿ ಸಮಯದಲ್ಲೇ ಆಕಸ್ಮಿಕವಾಗಿ ನೀರಿಗೆ ಬಿದ್ದು, ಕುಡಿದ ಮತ್ತಿನಿಂದಲೋ ಅಥವಾ ಮತ್ಯಾವುದೋ ಕಾರಣದಿಂದಲೋ ಹೊರ ಬರಲಾರದೇ ಮುಳುಗಿ ಸತ್ತಿರಬೇಕು ಎಂದೂ, ಇನ್ನು ಶವದ ಮರಣೋತ್ತರ ಪರೀಕ್ಷೆಯ ನಂತರವೇ ಎಲ್ಲ ವಿವರಗಳೂ ಹೊರಬರುವವು, ದುಃಖತಪ್ತರಾದ ಪತಿ ಶಶಿಧರ್ ವರದಿಗಾರರ ಬಳಿ ಯಾವ ಹೇಳಿಕೆ ಕೊಡಲೂ ಸಿದ್ಧರಿಲ್ಲ' ಎಂದೆಲ್ಲಾ ವರದಿಯಾಗಿತ್ತು.

ಕೀರ್ತಿಮಾನ್ ತಲೆಯೆತ್ತಿ ತಾಳ್ಮೆಗೆಟ್ಟು ಕಾಯುತ್ತಿರುವ ಭೀಮರಾಯರತ್ತ ನೋಡಿ ಕೇಳಿದ:

'ಒಂದು ವರ್ಷದ ಹಿಂದೆಯಷ್ಟೇ ಅಲ್ಲವೆ ಆಕೆಗೆ ಐದು ಕೋಟಿ ರೂ ಮೊತ್ತದ ಜೀವ ವಿಮಾ ಪಾಲಿಸಿ ನಾವು ಮಾರಿದ್ದು?'

ಭೀಮರಾವ್ ಅಸಹನೆಯಿಂದ ತಲೆಯಾಡಿಸಿ ಗದರಿದರು– 'ನಾವು' ಅಲ್ಲಯ್ಯಾ, ಪ್ರತಿವರ್ಷವೂ ನಮ್ಮ ಕಂಪನಿಯ ನಂಬರ್ ಒನ್ ಏಜೆಂಟ್ ಎಂಬ ಪ್ರಶಸ್ತಿ ಸಂಪಾದಿಸಿ ಎಲ್ಲರಿಗೂ ಮೋಸ ಮಾಡುತ್ತಿದ್ದಾನಲ್ಲ, ಶರಭ್ ಅವನು! ಅವನಿಂದ ಅನ್ನು, ಈ ಪಾಲಿಸಿಯನ್ನು ಕಣ್ಣು ಮುಚ್ಚಿ ನಾವು ಪಾಸ್ ಮಾಡಿದ್ದು ಅದೂ ನಾನು ರಜಾ ಇದ್ದ ಆ ಒಂದು ವಾರದಲ್ಲೇ'

ಕೀರ್ತಿಮಾನ್ ಮೆಲ್ಲಗೆ ಮುಗುಳ್ನಕ್ಕ. ಈ ಮಾತು ಅವನಿಗೆ ನ್ಯಾಯವೆನಿಸಲಿಲ್ಲ.

ಶರಭ್ ನಿಜಕ್ಕೂ ಪ್ರತಿಭಾವಂತ, ಯಶಸ್ವಿ ಪಾಲಿಸಿ ಏಜೆಂಟ್ ಮತ್ತು ತನ್ನ ಗೆಳೆಯ ಕೂಡಾ. ಅವನ ಯಾವ ಪಾಲಿಸಿಯೂ ಇದುವರೆಗೂ ಕಂಪನಿಗೆ ಅನಾವಶ್ಯಕ ನಷ್ಟವನ್ನೇನೂ ಮಾಡಿರಲಿಲ್ಲಾ..ಹಾಗೆ ನೋಡಿದರೆ ಅವನು ತನ್ನ ಹಸನ್ಮುಖಿ ಚಾರ್ಮ್‌ನಿಂದ ಊರಿನ ಶ್ರೀಮಂತರನ್ನೆಲ್ಲಾ ಬುಟ್ಟಿಗೆ ಹಾಕಿಕೊಂಡು ಅವರಿಂದ ಭಾರಿ ಮೊತ್ತದ ಪಾಲಿಸಿಗಳನ್ನು ಗಿಟ್ಟಿಸಿಕೊಂಡು ಕಂಪನಿಗೆ ಕೀರ್ತಿಯನ್ನೇ ತಂದಿದ್ದ. ಅವನು ತರುವ ದೊಡ್ಡ ಮೊತ್ತದ ಪಾಲಿಸಿಗಳ ಮೇಲೆ ಯಾವಾಗಲೂ ಕೆಂಗಣ್ಣು ಬಿಟ್ಟು ಆಕ್ಷೇಪಣೆಯೆತ್ತುತ್ತಿದ್ದವರು ಈ ಭೀಮರಾಯರೇ. ಆದರೂ ಇವತ್ತೇನೋ ಶರಭ್‌ನ ಗ್ರಹಚಾರ ಕೆಟ್ಟಿದಂತಿದೆ.

'ಸರಿ. ಈಗ ಈ ಪಾಲಿಸಿಯಿಂದ ನಮಗೆ ಬಂದ ಆಪತ್ತಾದರೂ ಏನು?' ಎಂದು ಮೆತ್ತಗೆ ಪ್ರಶ್ನಿಸಿದ ಕೀರ್ತಿಮಾನ್.

ಊದಿದ ಬೆಲೂನಿಗೆ ಪಿನ್ ಚುಚ್ಚಿದಂತೆ ಬುಸ್ಸ್ ಎಂದು ದೀರ್ಘವಾಗಿ ನಿಟ್ಟುಸಿರಿಟ್ಟರು ಭೀಮರಾವ್, ಮತ್ತೆ ಅಸಹನೆಯಿಂದ.

'ಸರಿ ಹೋಯ್ತು!..ನಿನಗೆ ಕೊಟ್ಟಿದ್ದ ಫೈಲ್ ಕಾಪೀನಾ ನೀನು ಓದೋದೇ ಇಲ್ಲಾ ಅನ್ನು..!' ಎಂದು ಅಲ್ಲಿದ್ದ ಆ ಕೇಸಿನ ದಪ್ಪ ಕಡತವನ್ನು ಕೈಗೆತ್ತಿಕೊಂಡು ದುರುಗುಟ್ಟಿದರು.

ಶುಕ್ರವಾರ ಸಂಜೆಯಷ್ಟೇ ಅವರು ರಿವ್ಯೂಗಾಗಿ ಕಳಿಸಿದ ಫೈಲ್, ವಾರಾಂತ್ಯದ ನಂತರ ಇಂದು ಸೋಮವಾರ, ಬೆಳಿಗ್ಗೆ 9 ಗಂಟೆಗೇ ಬಂದಿದ್ದು. ಇಂತಾ ಸೂಕ್ಷ್ಮವನ್ನೆಲ್ಲಾ ಭೀಮರಾಯರಿಂದ ನಿರೀಕ್ಷಿಸಲೂ ಸಾಧ್ಯವಿಲ್ಲ! ಸುಮ್ಮನಿರುವುದೇ ವಾಸಿ.

ಕನ್ನಡಕ ಮೂಗಿನ ಮೇಲೇರಿಸಿ ಗಡಸು ದನಿಯಲ್ಲಿ ಅಪರಾಧಿಗೆ ಗಲ್ಲು ಶಿಕ್ಷೆ ವಿಧಿಸುವ ಜಡ್ಜಿನಂತೆ ಓದತೊದಗಿದರು–

'ಈ ಪಾಲಿಸಿ ಪ್ರಕಾರ ಅಂಚನಾ ಆರು ತಿಂಗಳ ನಂತರ ಆತ್ಮಹತ್ಯೆ ಒಂದನ್ನು ಬಿಟ್ಟು ಬೇರೆ ಯಾವುದೇ ಸಹಜ ಅಥವಾ ಅಪಘಾತದಲ್ಲಿ ಮೃತಳಾದಳೆಂದರೆ ಆಕೆಯ ಪಾಲಿಸಿಯ ಪೂರ್ಣ ಮೊತ್ತವನ್ನು ಅಂದರೆ ಐದು ಕೋಟಿ ರೂ.ಗಳನ್ನು ಅವಳ ನಾಮಿನಿ ಅವಳಿ ತಂಗಿ ಕಂಚನಾ (ಉರ್ಫ್ ಕಂಚಿ ಎಂಬ ಅನ್ವರ್ಥನಾಮದ ನಟಿ) ಗೆ ಸಲ್ಲಿಸಿಬಿಡಬೇಕೆಂದು' ಎಂದು ಓದುತ್ತಿದ್ದಂತೆ,

ಕೀರ್ತಿಮಾನ್ ದಿಗ್ಗನೆದ್ದು, 'ಏನಂದಿರಿ? ಕಂಚಿ ಎಂಬ ಅವಳಿ ತಂಗಿಯೆ? ಆ ಹೆಸರಿನ ಚಿತ್ರ ತಾರೆ ಯಾರೂ ಇಲ್ಲವಲ್ಲಾ?' ಎಂದು ಅವರ ಮಾತನ್ನು ಮಧ್ಯದಲ್ಲೇ ತಡೆದನು.

ಮುಖ ಕಿವಿಚಿ ಭೀಮರಾವ್ ನುಡಿದರು, 'ಕೇವಲ ಅಲ್ಲೊಂದು ಇಲ್ಲೊಂದು ಐಟಮ್ ಸಾಂಗ್ ಮಾಡುವ, ರಂಗಭೂಮಿಯಲ್ಲಿ ಎರಡನೆ ದರ್ಜೆ ನಾಟಕ ಮಾಡುತ್ತಿರುವ ಸ್ಟೇಜ್ ಆರ್ಟಿಸ್ಟ್ ಅವಳು. ಅಷ್ಟಕ್ಕೇ ನಟಿ ಅಂತಾ ಹಾಕಿಕೊಂಡು ಬಿಟ್ಟಿದ್ದಾರೆ'

'ಹಾಗಾದರೆ ಅವಳಿ ತಂಗಿಯೆಂದರೆ ನೋಡಲು ಒಂದೇ ರೂಪ ಲಕ್ಷಣವಿರಬಹುದು ಅಲ್ಲವೆ?'ಎಂದು ಅವರಿಗೆ ಕೋಪ ಬರುವುದೆಂದು ತಿಳಿದೂ ಮತ್ತೆ ಅಡ್ಡಪ್ರಶ್ನೆ ಮುಂದುವರೆಸಿದ.

'ಅಯ್ಯೋ, ಹೌದು ಕಣಯ್ಯಾ!.. ನೀನು ತೆಪ್ಪಗೆ ಕೇಳಿಸಿಕೊಂಡರೆ ಎಲ್ಲಾ ಹೇಳುತ್ತೇನೆ..' ಎಂದು ಆ ಫೈಲಿನಿಂದ ಒಂದು ಭಾವಚಿತ್ರವನ್ನು ತೆಗೆದು ಮೇಜಿನ ಮೇಲೆ ಇವನತ್ತ ಎಸೆದರು.


ಅದು ಥೇಟ್ ಅಂಚನಾಳಂತೆ ಮುಖ, ರೂಪ ಲಕ್ಷಣ ಇರುವ ನಿಂತಿರುವ ಸುಂದರಿಯೊಬ್ಬಳ ಚಿತ್ರ. ಈಕೆ ನಾಟಕದ ಯಾವುದೋ ಪೌರಾಣಿಕ ಮಹಾರಾಣಿಯಂತೆ ವೇಷ ಭೂಷಣ ಧರಿಸಿದ್ದರಿಂದ ಮಾತ್ರ ಕೇವಲ ನಟಿಯೆಂದೂ, ಅಕ್ಕನಂತೆ ಶ್ರೀಮಂತೆಯಲ್ಲವೆಂದೂ ಚಿತ್ರದಲ್ಲೇ ಗುರುತಿಸಬಹುದಾಗಿತ್ತು.

'ಹೂಂ.. ಸರಿಯಾಗಿ ಕೇಳಿಸಿಕೋ! ಅಂಚನಾ ಈ ಪಾಲಿಸಿ ತೆಗೆದುಕೊಳ್ಳುವುದನ್ನೇ ಶಶಿಧರ್ ದೇಸಾಯಿ ಬಳಿ ಮದುವೆಗೆ ಷರತ್ತನ್ನಾಗಿ ಇಟ್ಟಿದ್ದಳು ಎಂದು ನನಗೆ ಗಾಳಿ ಸುದ್ದಿ ಬಂದಿದೆ. ತಾನು ಮಾತ್ರ ದೊಡ್ಡ ಹಣವಂತೆಯಾಗಿ ಐಷಾರಾಮ ಜೀವನ ನಡೆಸುವಾಗ ಒಡ ಹುಟ್ಟಿದ ಅವಳಿ ತಂಗಿ ಕಂಚಿ ಮಾತ್ರ ದುರದೃಷ್ಟವಶಾತ್ ಬಡವಿಯಾಗಿಯೇ ಉಳಿದು ಬಿಟ್ಟಳು ಎಂದು ಅಂಚನಾಗೆ ಮಹಾ ದುಃಖವಂತೆ. ಅವಳ ತಂಗಿ ಕಂಚಿಯೇ ಎಷ್ಟು ಬೇಡಾ ಅಂತಾ ಹೇಳಿದರೂ ಒಪ್ಪದೆ ಮೊಂಡು ಹಠ ಸಾಧಿಸಿ ಈ ಅಂಚನಾ, 'ಕೊನೆಪಕ್ಷ ತಾನು ಸತ್ತರಾದರೂ, ತಂಗಿ ಈ ಪಾಲಿಸಿ ದುಡ್ಡಿನಲ್ಲಿ ಮುಂದೆ ಸುಖವಾಗಿರಲಿ' ಎಂದು ನಮ್ಮ ಏಜೆಂಟ್ ಶರಭ್ ತಲೆಗೆ ತುಂಬಿದಳಂತೆ. ಅದಕ್ಕೆ ಆ ಕಂಚಿಯ ಏಜೆಂಟ್ ಯಾರೋ ಒಬ್ಬ ಇದ್ದಾನಂತೆ ತಲೆಹೋಕ ರಾಜೂ ಅಂತಾ, ಅವನದೂ ಇದಕ್ಕೆ ಕುಮ್ಮಕ್ಕು! ನಮ್ಮ ಶರಭ್‌ಗೆ ಮೊದಲೇ

## ಎಷ್ಟಿದ್ದರೇನು!

ಒಡವೆಗಳು ಎಷ್ಟಿದ್ದರೇನು,  
ಅವು ಬ್ಯಾಂಕ್ ಲಾಕರ್‌ನಲ್ಲೇ  
ಗಂಡು ಮಕ್ಕಳು ಎಷ್ಟಿದ್ದರೇನು,  
ಅಪ್ಪ–ಅಮ್ಮ ವೃದ್ಧಾಶ್ರಮದಲ್ಲೇ!

★ ಜಿ.ವಿ. ಪ್ರಭು





## ನಾಗೇಶ್ ಕುಮಾರ್ ಸಿ.ಎಸ್.

ಮೂಲತಃ ಬೆಂಗಳೂರಿನವರಾದ ನಾಗೇಶ್‌ಕುಮಾರ್ ಹವ್ಯಾಸಿ ಬರಹಗಾರರಾಗಿದ್ದು, ಕಥೆ, ಕಾದಂಬರಿ, ಪ್ರವಾಸ ಲೇಖನ ಬರೆಯುವ ಮೂಲಕ ಕನ್ನಡ ಸಾರಸ್ವತ ಲೋಕದಲ್ಲಿ ಹೆಸರು ಮಾಡುತ್ತಿದ್ದಾರೆ. ಸಿವಿಲ್ ಎಂಜಿನಿಯರಿಂಗ್ ಪದವೀಧರರಾದ ನಾಗೇಶ್, ಸದ್ಯ ಚೆನ್ನೈಯಲ್ಲಿ ಬಹುರಾಷ್ಟ್ರೀಯ ಸಂಸ್ಥೆಯೊಂದರಲ್ಲಿ ಉದ್ಯೋಗಿ. ಇವರು ಬರೆದ ಪತ್ತೇದಾರಿ ಶೈಲಿಯ ಕಥೆಗಳು, ಕಾದಂಬರಿ ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟವಾಗಿವೆ. 'ಸುಧಾ'ದಲ್ಲೂ ಇವರು ಕಥೆ, ಲೇಖನಗಳನ್ನು ಓದುಗರಿಗೆ ಉಣಬಡಿಸಿದ್ದಾರೆ. ಸರಳ ಭಾಷೆ, ನವಿರಾದ ಶೈಲಿ ಇವರ ಬರಹಗಳಲ್ಲಿ ಎದ್ದುಕಾಣುತ್ತದೆ.

'ಮುಳುಗುವ ಕೊಳ' ನಾಗೇಶ್ ಕುಮಾರ್ ಅವರ ಮತ್ತೊಂದು ಪತ್ತೇದಾರಿ ಕಿರು ಕಾದಂಬರಿ.

ಹೆಣ್ಣಿಂಗಿ ಬುದ್ಧಿ.. ಅವಳಿಗಾಗಿ ವಿಶೇಷ ಪ್ರೀಮಿಯಮ್, ಟರ್ಮ್ ಎಲ್ಲಾ ಬರೆಸಿ, ಕೇವಲ ತನಗೆ ಬರುವ ಕಮಿಶನ್ ಆಸೆಗಾಗಿ ಈ ದುಬಾರಿ ಪಾಲಿಸಿಯನ್ನು ನಾನು ಆಫೀಸಿನಲ್ಲಿಲ್ಲದ ವಾರದಲ್ಲಿ ನೋಡಿಕೊಂಡು, ಬಾಸ್ ಮುಂದೆ ಇಟ್ಟು ಹಲ್ಕಿರಿದನಂತೆ.. ಅವರಿಗೇನು? ಪಾಸ್ ಮಾಡಿಯೇಬಿಟ್ಟರು, ಹೇಗೂ ಕ್ಲೈಮ್ ಏನಾದರೂ ಬಂದರೆ ಬಗೆಹರಿಸಕ್ಕೆ ಇಲ್ಲಿ ನಾನಿದ್ದೇನಲ್ಲಾ ಅಂತಾ. ನನ್ನ ಹತ್ರ ಆಗ ಅಪ್ರೂವಲ್‌ಗೆ ಬಂದಿದ್ರೆ ಈ ಕಿಟಕಿಯಿಂದ ಹೊರಗೆ ಎಸೆದುಬಿಡ್ತಿದ್ದೆ. ಹಾಂ! ಎಂದು ಆ ಪಾಲಿಸಿ ಪತ್ರವನ್ನು ಪಟಪಟನೆ ಧ್ವಜದಂತೆ ಗಾಳಿಯಲ್ಲಿ ಆಡಿಸಿದರು ಭೀಮರಾವ್

ಕೀರ್ತಿಮಾನ್ ಶಾಂತ ದನಿಯಿಂದ, 'ಈಗ ಎಸೆಯಬೇಡಿ ಸದ್ಯಾ!..ಕೊಡಿ ಇಲ್ಲಿ' ಎನ್ನುತ್ತಾ ಪಾಲಿಸಿಯನ್ನು ಫೈಲಿಗೆ ಮರಳಿ ಸೇರಿಸಿ ಎಚ್ಚರಿಕೆಯಿಂದ ನುಡಿದ. 'ಸರ್, ಮೇಲ್ನೋಟಕ್ಕೆ ನನಗೇನೋ ಇದು ಮೋಸ ಅನ್ನಿಸ್ತಿಲ್ಲ..ಐದು ಕೋಟಿ ರೂ ಕೊಡಕ್ಕೆ ನಮ್ಮ ಕಂಪನಿಗೆ ಹೊಟ್ಟೆಯುರಿಯತ್ತೆ ಅನ್ನೋದು ನಿಜಾ ಆದರೆ.." ಎಂದಿದ್ದೇ ತಡ, ಭೀಮರಾವ್ ಮುಖ ಕೋಪದಿಂದ ಕೆಂಪಾಗಿ ಮತ್ತೆ ಧುಮುಗುಟ್ಟಿತು.

'ನಿನಗೆ ಅನ್ನಿಸಲ್ವೋ?..ಅದಕ್ಕೇ ನಾನಿಲ್ಲಿ, ನೀನಲ್ಲಿ ಕೂತಿರೋದು!' ಎಂದು ತೋರುಬೆರಳಾಡಿಸಿ ಹಂಗಿಸಿದರು. 'ಆದರೆ, ನನಗೇನೋ ಇದು ಫ್ರಾಡ್ ( ವಂಚನೆ) ಅನಿಸುತ್ತಿದೆ... ನನ್ನ ಕೆರಿಯರ್‌ನಲ್ಲೇ ಯಾವತ್ತೂ ನನ್ನ ಒಳಮನಸ್ಸು ದಾರಿ ತಪ್ಪಿಸಿಲ್ಲಾ. ನನಗೆ ಈ ಕೇಸಿನಲ್ಲಿ ಏನೋ ಮೋಸ, ತಟವಟ ಇದೆ ಅಂತ ಬಲವಾಗಿ ಅನ್ನಿಸ್ತಿದೆ. ಇದು ಖಂಡಿತಾ 'ಫಿಶಿ' ಎಂದು ಜೋರಾಗಿ ಕೈ ಆಡಿಸುತ್ತಾ ತಮ್ಮನ್ನು ತಾವೇ ಸಮರ್ಥಿಸಿಕೊಳ್ಳುತ್ತಲೇ ಹೋದರು ಭೀಮರಾವ್.

ಕೀರ್ತಿಮಾನ್ ಹುಳ್ಳಗೆ ನಗುತ್ತಾ, 'ಅಯ್ಯೋ ಬಿಡಿ ಸಾರ್!. ನಿಮಗೆ ಮೊಸರನ್ನದಲ್ಲೂ 'ಫಿಶ್' ವಾಸನೆ ಬಂದು ಬಿಡುತ್ತದೆ. ಬರೇ ಅನುಮಾನ ಒಂದೇ ಸಾಲದು ಕಾರಣ, ಪುರಾವೆ ಬೇಕಲ್ವೇ? ಸುಮ್ಮನೆ ನೀವು..!' ಎಂದು ನಕಾರಾತ್ಮಕವಾಗಿ ಗೋಣು ಆಡಿಸಿಬಿಟ್ಟ.

ಬಂದ ಕೋಪವನ್ನು ನುಂಗಿಕೊಳ್ಳುತ್ತಾ ಕಬ್ಬಿಣವನ್ನು ಕುಯ್ಯುವಂತಾ ಮೊನಚು ದನಿಯಲ್ಲಿ ಉತ್ತರಿಸಿದರು ಭೀಮರಾವ್:

'ಕಾರಣ? ಪುರಾವೆ? ಅದು ನಿನ್ನ ಕೆಲಸ. ಇಲ್ಲಿಂದ ಎದ್ದ ಕೂಡಲೆ ನೀನು ಈ ಕೇಸನ್ನು ತೆಗೆದುಕೊಂಡು ಒಡನೆಯೇ ಇದರಲ್ಲಿರುವ ಮೋಸವನ್ನು ಪತ್ತೆಹಚ್ಚಿ ನಮ್ಮ ಸಂಸ್ಥೆಗಾಗುವ ಐದು ಕೋಟಿ ರೂ ನಷ್ಟವನ್ನು ತಡೆಗಟ್ಟುತ್ತೀಯೆ. ನಾನು ಮತ್ತೆ ನಿನ್ನನ್ನು ಕರೆಯುವುದಿಲ್ಲ. ನೀನಾಗಿಯೆ ಈ ಕೇಸನ್ನು ಬಗೆಹರಿಸಿ ಫೈಲ್ ಕಟ್ಟಿಟ್ಟು ನನ್ನ ಹತ್ತಿರ ತರಬೇಕು. ಇನ್ನು ನೀನು ಹೊರಡಬಹುದು' ಎಂದು ಕೊನೆ ಅಪ್ಪಣೆಯಿತ್ತು ಬೇರೊಂದು ಫೈಲನ್ನು ಕೈಗೆತ್ತಿಕೊಂಡರು ಭೀಮರಾವ್.

ಇನ್ನು ಅವರ ಹತ್ತಿರ ಚರ್ಚಿಸುವುದೇನೂ ಇಲ್ಲವೆಂದು ಅರಿತು ನಿಟ್ಟುಸಿರಿಟ್ಟು ಫೈಲೆತ್ತಿಕೊಂಡು ಎದ್ದ ಕೀರ್ತಿಮಾನ್.

ಅವನು ತನ್ನ ಸೀಟಿಗೆ ಹೋಗುತ್ತಿದ್ದಂತೆಯೇ ಅಲ್ಲಿ ತನಗಾಗಿ ಶರಭ್ ಕಾಯುತ್ತಿರುವುದು ಕಾಣಿಸಿತು. ಅವನ ಮುಖ ಸಪ್ಪಗೆ ಇಳಿದಿತ್ತು. ಪದೇ ಪದೇ ತನ್ನ ಸರಿಯಾಗೇ ಇರುವ ಟೈಯನ್ನು ಕೆಳಗೆ ಎಳೆದುಕೊಳ್ಳುತ್ತಾ ಚಡಪಡಿಸುತ್ತಿದ್ದ. ಅವನ ಕತ್ತು ಕಿವುಚುತ್ತಿದ್ದುದು ಈ ಬಿಕ್ಕಟ್ಟು ಎಂದು ಸೂಕ್ಷ್ಮಮತಿ ಕೀರ್ತಿಮಾನ್‌ಗೆ ತಿಳಿದುಹೋಯಿತು.

'ನಾನು ಅಂತಾ ತಪ್ಪನ್ನೇನೂ ಮಾಡಲಿಲ್ಲ ಅಲ್ವಾ, ಕೀರ್ತಿ? ಶ್ರೀಮಂತೆ ಅಕ್ಕ ಅವಳಿ ತಂಗಿಯಾಗಿದ್ದವಳಿಗೆ ಪಾಲಿಸಿ ಕೊಡಿಸ್ತೇನೆ ಅಂದರೆ ನಾನು ಇಲ್ಲಾ ಅಂತಾ ಓಡಿ ಹೋಗಬೇಕಿತ್ತೆ?. ಅವಳು ಬೇಗ ಸತ್ತರೆ ನನ್ನ ತಪ್ಪೆ ಹೇಳು? ವರ್ಷಕ್ಕೆ ನಾಲ್ಕು ಲಕ್ಷ ರೂ. ಪ್ರೀಮಿಯಮ್ ಬರುವಂತಾ ಮೆಗಾ ಪಾಲಿಸಿ ತಂದು ಕೊಡಿಸಿದ್ದೇನೆ. ಹೊಗಳೋದಿರಲಿ, ಆ ನಿಮ್ಮ ಬಾಸ್, ಬಂದ ಬಂದವರಿಗೆಲ್ಲ ನನ್ನ ತಲೆ ಮೇಲೆ ಗೂಬೆ ಕೂರಿಸಿ ಹೇಳಿ ಕಳಿಸೋದು ಯಾವ ನ್ಯಾಯ ಅಂತೀನಿ..?' ಎಂದು ನಿಂತಲ್ಲೇ ಬಡಬಡನೆ ಕೋಪದಿಂದ ಒದರಿದ ಶರಭ್.

'ಮೊದಲು ಕೂತ್ಕೊಳ್ಳಯ್ಯಾ ಇಲ್ಲಿ.. ನಿಧಾನವಾಗಿ ಮಾತಾನಾಡೋಣ' ಎಂದು ಆರಡಿ ಎತ್ತರ ಗುಂಗುರು ಕೂದಲಿನ ಗೋಲ್ಡ್ ರಿಮ್ ಚಿಕ್ಕ ಕನ್ನಡಕ ಧರಿಸಿ ಹ್ಯಾಂಡ್ಸಮ್ ಆಗಿ ಕಾಣುತ್ತಿದ್ದ ತನ್ನ ಗೆಳೆಯನ ಕೈ ಹಿಡಿದೆಳೆದು ಪಕ್ಕದಲ್ಲಿ ಕೂಡಿಸಿಕೊಂಡ ಕೀರ್ತಿಮಾನ್..

'ಶರೂ, ತಗೊಳ್ಳೋ, ನೀರು ಕುಡಿ. ನನಗೆ ವಿವರವಾಗಿ ಹೇಳು. ನೀನು ಯಾವ ರೀತಿ ಡೀಲ್ ಮಾಡಿದ್ದೆ?. ನಿನಗೆ ಅವರ ಬಗ್ಗೆ ಏನನಿಸಿತ್ತು? ಎಲ್ಲಾ' ಎಂದು ಸಂತೈಸಿದ ಕೀರ್ತಿಮಾನ್.

ಸ್ವಲ್ಪ ಸಮಾಧಾನ ತಂದುಕೊಳ್ಳುತ್ತಾ ಶರಭ್ ವಿವರಿಸಹತ್ತಿದ.

'ಅಂಚನಾ ನಾನು ಕಂಡ ಹಾಗೆ ಬಹಳ ಮೃದು ಮನಸ್ಸಿನ ವ್ಯಕ್ತಿ ಕಣಯ್ಯಾ. ತಂಗಿ ಅಂದರೆ ಪಂಚಪ್ರಾಣ. ಆದರೆ ಈ ಪಾಲಿಸಿ ಒಂದು ವಿಷಯದಲ್ಲೇ ಅವಳು ಹಠ ಹಿಡಿದಿದ್ದು ಅಂತಾ ಅವರ ಗಂಡಾನೂ ಹೇಳುತಿದ್ರು..ಇನ್ನು ಅವಳಿ ತಂಗಿ ಕಂಚಿ, ಅವಳಂತೂ ಶೋ ಪೀಸ್ ಕಣಯ್ಯಾ. ಲೋಕ ಜ್ಞಾನವಿಲ್ಲ. ಆದರೆ ಸ್ವಲ್ಪ ಆಸೆಬುರಕಿ ಅನಿಸುತ್ತೆ. ಹೊರಗೆ 'ತನಗೇಕೆ ಇಂತಾ ದೊಡ್ಡ ಪಾಲಿಸಿ' ಅಂತ ಅಕ್ಕನ ಜತೆ ಜಗಳವಾಡಿದರೂ ಆ ಏಜೆಂಟ್ ರಾಜೂಗೆ ಹೇಳಿ ಕಳಿಸಿದ್ದಳು; ನನ್ನತ್ರ ಬೇಗ ಅಕ್ಕನಿಗೆ ಪಾಲಿಸಿ ಮಾಡಿಸಿಕೊಡಿ' ಅಂತಾ. ಆ ಏಜೆಂಟೂ ಸ್ವಲ್ಪ ದುರಾಸೆ ಪ್ರಾಣಿ ತರಹ ಇದ್ದಾನೆ ಎಂದು ನನಗನ್ನಿಸಿತು: 'ಇವಳಿಗೇಕೆ ಅಕ್ಕನ ಐದು ಕೋಟಿ ರೂ ಪಾಲಿಸಿ ಬಗ್ಗೆ ಇಷ್ಟು ಅವಸರ, ಅದೂ ಆಕೆ ಸತ್ತರೆ ಮಾತ್ರ ಈ ಹಣ ನಾಮಿನಿ ಆಗಿ ಇವಳಿಗೆ ಬರುವಂತದು? ಸ್ವಲ್ಪ ಅವಶ್ಯಕತೆಗಿಂತ ಹೆಚ್ಚು ಆಸಕ್ತಿ ಅಂತಾ' ಎನ್ನುತ್ತಾ ಹೋದ ಶರಭ್.

ಕೀರ್ತಿಮಾನ್ ಮಧ್ಯಪ್ರವೇಶಿಸಿ ಕೇಳಿದ: 'ಹಾಗಾದರೆ, ಆಕೆಯ ಬಗ್ಗೆ ನಿನಗೇನಾದರೂ ಅನುಮಾನವಿದೆಯೆ?. ಅಕ್ಕನನ್ನು ಹೇಗಾದರೂ ಮುಗಿಸಿಬಿಟ್ಟು, ತಾನು ಆ 5 ಕೋಟಿ ರೂ ಪಡೆದುಬಿಡೋಣಾ ಎಂದು ಕೊಂಡಿರಬಹುದಾ?'

ಶರಭ್ ಹಾಗೆ ತನಗನ್ನಿಸದೆಂಬಂತೆ ಅಚ್ಚರಿಯಿಂದ ಕಣ್ಣರಳಿಸಿದ,

'ನೊ ನೋ!..ಅವಳು ಅಷ್ಟು ಕೃತ್ರಿಮ ತಿಳಿದವಳಲ್ಲಾ ಅಂತಾ ನನ್ನ ಭಾವನೆ. ಆಸೆಬುರುಕಿ ಆದರೂ ಅಕ್ಕ ತಂಗಿಯರಿಬ್ಬರೂ ಪರಸ್ಪರ ಪ್ರೀತಿ– ವಿಶ್ವಾಸ ಇದೆ